INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -1, January-February, 2023,
Page No,69 - 77
Peer -Reviewed, Refereed Journal

# ಬೆಟ್ಟದಪುರ ಪರಿಸರದ ದೇವಾಲಯಗಳು–ಒಂದು ಅವಲೋಕನ

*ಶಂಕರಯ್ಯ.[1]
**ಡಾ.ಕೆ.ಪ್ರಭು.[2]

ಬೆಟ್ಟದಪುರವು ಪಿರಿಯಾಪಟ್ಟಣದಿಂದ ಉತ್ತರ ದಿಕ್ಕಿಗೆ ಸುಮಾರು 17 ಕಿ.ಮೀ. ಅಂತರದಲ್ಲಿದೆ. ಈ ಸ್ಥಳವು ಒಂದು ಹೋಬಳಿ ಕೇಂದ್ರವಾಗಿದ್ದು, ಪಶ್ಚಿಮಕ್ಕೆ ಕುಶಾಲನಗರ ಮತ್ತು ಮಡಿಕೇರಿ, ಪೂರ್ವಕ್ಕೆ ಕೃಷ್ಣರಾಜನಗರ ಮತ್ತು ಮೈಸೂರು, ಉತ್ತರಕ್ಕೆ ಅರಕಲಗೂಡು ಮತ್ತು ಹಾಸನ ಹಾಗೂ ದಕ್ಷಿಣಕ್ಕೆ ಪಿರಿಯಾಪಟ್ಟಣ ಮೂಲಕ ವಿರಾಜಪೇಟೆಗೆ ಸಂಪರ್ಕವನ್ನು ಹೊಂದಿದೆ. ಈ ಸ್ಥಳವು ಪುರಾಣಕಾಲದಿಂದಲೂ ಪ್ರಸಿದ್ಧವಾಗಿದ್ದು ಪವಿತ್ರ ಯಾತ್ರಾಸ್ಥಳವೂ ಆಗಿದೆ. ಬೆಟ್ಟದಪುರವನ್ನು ದ್ವಾರಕೆಯಿಂದ ಬಂದ ವಿಕ್ರಮರಾಯನ ಮಗ ಚಂಗಲರಾಯನ ಮಗ ನಿರ್ಮಿಸಿದನೆಂದು ಪ್ರತೀತಿ ಇದೆ.

ಈ ಪ್ರದೇಶವನ್ನು ಶ್ರೀಗಿರಿ, ಗಿರಿಪುರ, ಉದಯಗಿರಿ, ಶೈಲಪುರ, ಭೈರವಪುರ ಎಂಬ ಹೆಸರುಗಳಿಂದ ಕರೆಯುತ್ತಿದ್ದುದು ಶಾಸನಗಲಿಂದ ಮತ್ತುಇನ್ನಿತರ ಸ್ಥಳೀಯ ಆಧಾರಗಳಿಂದ ತಿಳಿದುಬರುತ್ತದೆ. ಈ ಪ್ರಾಂತ್ಯದಲ್ಲಿ ವಿಜಯನಗರ ಅರಸರು, ಮೈಸೂರು ಒಡೆಯರು, ಚೋಳರು ಮತ್ತು ಚಂಗಾಳ್ವ ಅರಸರು ಆಳ್ವಿಕೆ ನಡೆಸಿ ತಮ್ಮದೇಯಾದ ಕೊಡುಗೆಯನ್ನು ನೀಡಿ ಹೋಗಿರುವುದರಿಂದ ಈ ಪ್ರಾಂತ್ಯವು ಐತಿಹಾಸಿಕವಾಗಿ ತನ್ನದೆಯಾದ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿನ ದೇವಾಲಯಗಳು, ಜೈನಬಸದಿಗಳು, ಕೋಟೆಕೊತ್ತಲಗಳು ಹಾಗೂ ಸಣ್ಣ ಸಣ್ಣ ಮಂಟಪಗಳು ಅಲ್ಲಲ್ಲಿ ಕಂಡುಬರುತ್ತವೆ. ಇಲ್ಲಿರುವ ಬೆಟ್ಟವು ಅತ್ಯಂತ ಎತ್ತರವಾಗಿದ್ದು ಪ್ರವಾಸಿಗರಿಗೆ ಯಾತ್ರಾಸ್ಥಳವಾಗಿದೆ. ಈ ಬೆಟ್ಟದಿಂದಲೇ ಇದಕ್ಕೆ ಬೆಟ್ಟದಪುರ ಎಂದು ಹೆಸರು ಬಂದಿದೆ.

ಬೆಟ್ಟದಪುರ ಸುತ್ತಮುತ್ತಲ ಜನತೆಯನ್ನು ಆಕರ್ಷಿಸುವ ಒಂದು ಪ್ರಮುಖ ಆಕರ್ಷಣೆ ಎಂದರೆ ವಿಶಿಷ್ಟ ರೀತಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು. ಇಲ್ಲಿ ಕಂಡುಬರುವ ಮಲ್ಲಿಕಾರ್ಜುನ ದೇವಾಲಯ, ಪವಾಡ ಬಸವೇಶ್ವರ ದೇವಾಲಯ, ರಾಮೇಶ್ವರ ದೇವಾಲಯ, ಬೆಟ್ಟದ ಮೇಲಿರುವ ಸಿಡಿಲು ಮಲ್ಲಿಕಾರ್ಜುನ ದೇವಾಲಯ, ವೀರಭದ್ರೇಶ್ವರ ದೇವಾಲಯ ಹಾಗೂ ಆಂಜನೇಯಸ್ವಾಮಿ ದೇವಾಲಯಗಳು ಅತ್ಯಾಕರ್ಷಕವಾದವುಗಳಾಗಿವೆ. ಇಲ್ಲಿನ ಸ್ಥಳೀಯ ಜನತೆ ಹಿಂದಿನ ಕಾಲದಲ್ಲಿ

---

1. ಸಂಶೋಧಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಮೈಸೂರು ವಿ.ವಿ ಮೈಸೂರು
2. ಮಾರ್ಗದರ್ಶಕರು &ಅಧ್ಯಕ್ಷರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಮೈಸೂರು ವಿ.ವಿ ಮೈಸೂರು

ರಚನೆಯಾಗಿರುವ ಈ ದೇವಾಲಯಗಳೆಲ್ಲವೂ ಚೋಳರಿಂದ ನಿರ್ಮಿತವಾದವು ಎಂದು ಹೇಳುವುದು ರೂಢಿಯಾಗಿದ್ದು, ಅದರಂತೆಯೇ ಇಲ್ಲಿರುವ ದೇವಲಯಗಳು ಚಂಗಾಳ್ವ ಹಾಗೂ ಚೋಳರ ಕಾಲದಲ್ಲಿ ಸುಮಾರು 10 ರಿಂದ 16ನೇ ಶತಮಾನದ ಅವಧಿಯಲ್ಲಿ ರಚನೆಯಾದವು ಎಂದು ತಿಳಿದುಬರುತ್ತದೆ.

**ಮಲ್ಲಿಕಾರ್ಜುನಸ್ವಾಮಿ ದೇವಾಲಯ**

ಈ ದೇವಾಲಯವು ಊರಿನ ಕೇಂದ್ರ ಭಾಗದಲ್ಲಿದ್ದು ಸುಂದರವಾದ ಗ್ರಾನೈಟ್ ಕಲ್ಲಿನಿಂದ ನಿರ್ಮಾಣಗೊಂಡಿದೆ. ಇದು 16ನೇ ಶತಮಾನದವರೆಗೂ ಜೈನ ಬಸದಿಯಾಗಿದ್ದು, ಅನಂತರ ಶೈವ ದೇವಾಲಯವಾಗಿ ಪರಿಣಮಿಸಿತ್ತು ಎಂಬುದು ಅಲ್ಲಿನ ಸ್ಥಳೀಯರ ಅಭಿಪ್ರಾಯ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಇಲ್ಲಿ ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ಮುಖಮಂಟಪವನ್ನು ಕಾಣಬಹುದು. ಗರ್ಭಗುಡಿಯಲ್ಲಿ ಸುಮಾರು ಮೂರು ಅಡಿ ಎತ್ತರದ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗುಡಿಯ ದ್ವಾರದ ಮೇಲೆ ಲಲಾಟಬಿಂಬದಲ್ಲಿ ಶೈವನ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಗರ್ಭಗೃಹ 10*10 ಅಡಿ ಚದರ ಸುತ್ತಳತೆಯನ್ನೊಂದಿದ್ದು, ಗರ್ಭಗುಡಿಯಿಂದ ಮುಖಮಂಟಪದವರೆಗೆ ಸುಮಾರು 100 ಅಡಿ ಉದ್ದವಿದೆ.ಗ್ ಅರ್ಭಗುಡಿಯ ನಾಲ್ಕು ಮೂಲೆಯಲ್ಲೂ ಗೋಡೆಗೆ ಹೊಂದಿಕೊಂಡಂತೆ ಕಂಬಗಳಿವೆ. ಗರ್ಭಗುಡಿಯ ದ್ವಾರವು ಹಿತ್ತಾಳೆಯ ಕವಚವನ್ನು ಹೊಂದಿದೆ. ಬಾಗಿಲಲ್ಲಿ ಸುಂದರವಾದ ಕುಸುರಿ ಕೆತ್ತನೆಯಿಂಅ ಕೂಡಿದ ಸುರುಳಿ ಹೂಬಳ್ಳಿಗಳು ಹಾಗೂ ದ್ವಾರದ ಎಡ ಮತ್ತು ಬಲಪಾರ್ಶ್ವಗಳಲ್ಲಿ ನಾಲ್ಕು ಕೈಗಳ ಇಬ್ಬರೂ ಪುರುಷರ ಕೆತ್ತನೆ ಶಿಲ್ಪಗಳಿದ್ದು ತಲೆಯಲ್ಲಿ ಕಿರೀಟ, ಬಲಭಾಗದ ಒಂದು ಕೈಯಲ್ಲಿ ತ್ರಿಶೂಲ, ಎಡಭಾಗದ ಕೈಯಲ್ಲಿ ಒಂದು ಢಮರು, ಮತ್ತೊಂದು ಕೈಯಲ್ಲಿ ಗಧೆಯನ್ನು ಹಿಡಿದಿರುವ ಪೌರುಷರ ಶಿಲ್ಪಗಳನ್ನು ದ್ವಾರಕ್ಕೆ ಹೊಂದಿಕೊಂಡಂತೆ ಎರಡು ಕಡೆಗಳಲ್ಲಿ ಕಾಣಬಹುದು. ಗರ್ಭಗುಡಿಯ ಮುಂಭಾಗದ ಬಲಪಾರ್ಶ್ವದಲ್ಲಿ ನಾಗರ ಶಿಲ್ಪ, ಎಡ ಪಾರ್ಶ್ವದಲ್ಲಿ ಪುರುಷನ ಶಿಲ್ಪಗಳು ಕಂಡುಬರುತ್ತವೆ.

ಸುಕನಾಸಿಯು 25*25 ಅಡಿ ಚದರ ಸುತ್ತಳತೆಯನ್ನು ಹೊಂದಿದ್ದು, ಯಾವುದೇ ರೀತಿಯ ವಿಗ್ರಹಗಳು ಕಂಡುಬರುವುದಿಲ್ಲ. ಗರ್ಭಗುಡಿಯ ಮೇಲ್ಭಾಗದಲ್ಲಿ ಸುಮಾರು 30 ಅಡಿ ಎತ್ತರದ ವಿಮಾನವಿದೆ. ಈ ದೇವಾಲಯದ ಗರ್ಭಗುಡಿಯು ಸುಮಾರು 3 ಅಡಿ ಎತ್ತರದ ಜಗತಿಯ ಮೇಲೆ ರಚನೆಯಾಗಿದೆ. ನವರಂಗದಲ್ಲಿ ವೃತ್ತಾಕಾರವಾಗಿರುವ ಕಂಬಗಳನ್ನು ಕಾಣಬಹುದು. ಈ ದೇವಾಲಯದಲ್ಲಿ ಗಾಳಿ ಬೆಳಕಿಗೋಸ್ಕರ ಜಾಲಂಧರಗಳನ್ನು ಇಡಲಾಗಿದೆ. ದಕ್ಷಿಣ ದಿಕ್ಕಿಗೊಂದು ಚಿಕ್ಕದಾದ ಪ್ರವೇಶ ದ್ವಾರವನ್ನು ಕಲ್ಪಿಸಲಾಗಿದೆ. ದೇವಾಲಯದ ಮೇಲ್ಭಾಗದಲ್ಲಿ ಎಂಟು ದಿಕ್ಕುಗಳಿಗೂ ಸೇರಿದಂತೆ ಇಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಎಂಟು ಬಸವನ ವಿಗ್ರಹಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು 30 ಅಡಿ ಎತ್ತರದ ಹಿತ್ತಾಳೆಯಿಂದ ಮಾಡಿದ ಧ್ವಜಸ್ತಂಭವನ್ನು ಕಾಣಬಹುದು.

ದೇವಾಲಯದ ಹೊರಭಾಗದ ಭಿತ್ತಿಯಲ್ಲಿ ಉತ್ತರ ದಿಕ್ಕಿಗೆ ಹನುಮಂತನ ವಿಗ್ರಹ ಮತ್ತು ಶಿವಲಿಂಗ ಹಾಗೂ ದಕ್ಷಿಣ ದಿಕ್ಕಿನಲ್ಲೂ ಸಹ ಹನುಮಂತ ಮತ್ತು ಕಮಲದ ಚಿತ್ರಗಳ ಕೆತ್ತನೆಗಳನ್ನು ಕಾಣಬಹುದು.

**ಬಸವೇಶ್ವರ ದೇವಾಲಯ**

ಈ ದೇವಾಲಯವು ಊಇನ ಒಳಭಾಗದಲ್ಲಿ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಎದುರಿನಲ್ಲಿದೆ. ಇದು ಪಶ್ಚಿಮಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದನ್ನು ಪವಾಡ ಬಸವೇಶ್ವರ ದೇವಾಲಯವೆಂದು ಸಹ ಕರೆಯುವುದು ರೂಢಿಯಲ್ಲಿದೆ. ಇದು ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದ್ದು, ಗರ್ಭಗೃಹದಲ್ಲಿ ನಂದಿಯ ಮೂರ್ತಿಶಿಲ್ಪವಿದ್ದು, ನವರಂಗದ ಎರಡು ಕಡೆಗಳಲ್ಲಿ ಚೌಕಾಕಾರವಾಗಿರುವ ಮತ್ತು 16 ಮುಖಗಳನ್ನು ಹೊಂದಿರುವ ಕಂಬಗಳನ್ನು ಕಾಣಬಹುದು ಹಾಗೂ ನವರಂಗದ ಹೊಸ್ತಿಲ ಎರಡು ಕಡೆಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಬೃಹತ್ತಾದ ನಂದಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಗರ್ಭಗುಡಿಯ ಮೇಲ್ಭಾಗದಲ್ಲಿ 30 ಅಡಿ ಎತ್ತರವಾದ ವಿಮಾನವಿದ್ದು, ಇದು ಸಹ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟಿದೆ. ವಿಮಾನದ ಮೇಲೆ ಮಧ್ಯ ಅಂತಸ್ತಿನಲ್ಲಿ ನಾಲ್ಕು ದಿಕ್ಕುಗಳಿಗೂ ಹೊಂದುವಂತೆ ಮೂಲೆಮೂಲೆಗಳಲ್ಲಿ ಸಣ್ಣ–ಸಣ್ಣ ನಂದಿಯ ವಿಗ್ರಹಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದಾರೆ. ಚಂಗಾಳ್ವರ ಆಡಾಳಿತಾವಧಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯ ಸುಮಾರು 35 ಅಡಿ ಉದ್ದವನ್ನು ಹೊಂದಿದೆ.

**ರಾಮ ದೇವಾಲಯ**

ಈ ದೇವಾಲಯವು ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದೆ. ಇದು ಕೋದಂಡರಾಮ ದೇವಾಲಾಯ್ವೆಂದೂ ಸಹ ಹೆಸರುವಾಸಿಯಾಗಿದೆ. ಈ ದೇವಾಲಯವು ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದ್ದು ಮೂಲತಃ ಇದು ಚಂಗಾಳ್ವರ ವಾಸ್ತುಶೈಲಿಯನ್ನು ಹೊಂದಿದ್ದರೂ ಇದರ ಜೊತೆಗೆ ಮೈಸೂರು ಒಡೆಯರ ಕಾಲದ ಹಿಂದೂ ಮುಸ್ಲಿಂ ಶೈಲಿಯನ್ನು ಕಾಣಬಹುದು. ಗರ್ಭಗುಡಿಯಲ್ಲಿ ರಾಮದೇವರ ವಿಗ್ರಹವಿದ್ದು, ಸುಖನಾಸಿ ಯಾವುದೇ ವಿಗ್ರಹಗಳು ಕಂಡುಬರದೇ, ನವರಂಗವು 25*25 ಅಡಿ ಚದರ ಸುತ್ತಳತೆಯನ್ನು ಹೊಂದಿದ್ದು, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಎರಡು ಕಡೆಗೂ ಸಾಲು ಕಂಬಗಳಿವೆ. ಒಂದೊಂದು ಸಾಲಿನಲ್ಲಿ 4 ಕಂಬಗಳಂತೆ ಒಟ್ಟು 16 ಕಂಬಗಳನ್ನು ಕಾಣಬಹುದು. ದೇವಾಲಯದ ಮೇಲ್ಭಾಗದಲ್ಲಿ ಮೈಸೂರು ಒಡೆಯರ ಕಾಲದ ವಾಸ್ತುಶೈಲಿಯ ಗೋಪುರವಿದೆ.

**ಬೆಟ್ಟದ ಮೇಲಿನ ದೇವಾಲಯಗಳು**

ಬೆಟ್ಟದಪುರದಲ್ಲಿ ಕಂಡುಬರುವ ಬೆಟ್ಟವು ಪುರಾಣ ಕಾಲದಿಂದಲೂ ಐತಿಹಾಸಿಕ ಮಹತ್ವವನ್ನು ಪಡೆದಿರುವ ಬೆಟ್ಟವಾಗಿದೆ. ಈ ಬೆಟ್ಟವು ಊರಿನ ಆಗ್ನೇಯ ದಿಕ್ಕಿಗೆ ಕಂಡುಬರುತ್ತದೆ. ಈ ಬೆಟ್ಟಕ್ಕೆ ಹಿಂದೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು. ಶ್ರೀಶೈಲ, ವಿಜಯಾಚಲ ವೀಣಾದ್ರಿ, ಕುಡುಚಾದ್ರಿ ಎಂಬ ಹೆಸರುಗಳ ಜೊತೆಗೆ ಇದು ಐದು ದಿಕ್ಕುಗಳಿಂದ ನೋಡಿದರೆ ಒಂದೊಂದು ದಿಕ್ಕಿಗೂ ಒಂದೊಂದು ಆಕಾರದಲ್ಲಿ ಕಾಣುವುದರಿಂದ ಇದನ್ನು ಪಂಚಮುಖಿ ಬೆಟ್ಟ ಎಂಬ ಹೆಸರಿದ್ದು, ತದನಂತರ ಸುಮಾರು 14–15ನೇ ಶತಮಾನದಲ್ಲಿ ಮಲ್ಲಿಕಾರ್ಜುನಸ್ವಾಮಿ ಬೆಟ್ಟವಾಗಿ ಪರಿವರ್ತನೆ ಹೊಂದಿತು. ಈ ಬೆಟ್ಟದ ಎತ್ತರ ಸಮುದ್ರ ಮಟ್ಟದಿಂದ ಸುಮಾರು 4389 ಅಡಿಗಳಿದ್ದು, ಸುಮಾರು 3110 ಮೆಟ್ಟಿಲುಗಳಿಂದ ಕೂಡಿದೆ. ಬೆಟ್ಟವನ್ನು ಏರಲು ಹೋದಲ್ಲಿ ಮೆಟ್ಟಿಲು ತುಂಬಾ ಕಡಿದಾಗಿವೆ. ಈ ಮೆಟ್ಟಿಲುಗಳು ಅಲ್ಲಲ್ಲಿ ನಂದಿಚಿತ್ರ, ಕೈ ಮುಗಿಯುತ್ತಿರುವ ಪುರುಷ, ಕಮಲ ಹಾಗೂ ಇನ್ನಿತರ ಉಬ್ಬುಶಿಲ್ಪ ಕೆತ್ತನೆಗಳನ್ನು ಬೆಟ್ಟವನ್ನೇರುತ್ತ ಹೋದಂತೆಲ್ಲಾ ಅಲ್ಲಲ್ಲಿ ಕಾಣಬಹುದು. ಪ್ರಸ್ತುತವಾಗಿ ಈ ಬೆಟ್ಟವನ್ನು ಮಲ್ಲಯ್ಯನಬೆಟ್ಟ ಎಂದು ಕರೆಯುವುದು ಸ್ಥಳೀಯ ಜನತೆಯಲ್ಲಿ ರೂಢಿಯಲ್ಲಿದೆ. ಈ ಹಿಂದೆ ಇದು ಮಲ್ಲಿನಾಥ ಜೈನ ತೀರ್ಥಂಕರನ ಬೆಟ್ಟವಾಗಿದ್ದರೂ ಸಹ ಜೈನಧರ್ಮದ ಬಗ್ಗೆ ತಿಳಿಯಲು ಅಂದಿನ ಕಾಲದ ಯಾವುದೇ ಶಾಸನಗಳಾಗಲಿ, ಜೈನ ಶಿಲ್ಪಗಳಾಗಲಿ ಹಾಗೂ ಇನ್ನಿತರ ಯಾವುದೇ ರೀತಿಯ ಕುರುಹುಗಳು ಈಗ ನಮಗೆ ದೊರೆಯುವುದಿಲ್ಲ. ಈ ಬೆಟ್ಟದಲ್ಲಿ 101 ದೇವಾಲಯಗಳು ಮತ್ತು 101 ಕೊಳಗಳು ಇವೆ ಎಂಬುದು ಜನಜನಿತವಾದ ಮಾತಾಗಿದ್ದರು. ನಂಬಲರ್ಹವಾದ ಮಾಹಿತಿಗಳು ದೊರೆಯುವುದು ಕಷ್ಟ.

**ಗೋಪುರ**

ಬೆಟ್ಟದ ತಪ್ಪಲಿನಲ್ಲಿ 50 ರಿಂದ 60 ಅಡಿಎ ತ್ತರದ ಗೋಪುರವಿದೆ. ಇದು ಸುಮಾರು 15 ಅಡಿಗಳವರೆಗೆ ಕಲ್ಲಿನಿಂದ ನಂತರ ಇನ್ನುಳಿದ ಭಾಗ ಮೇಲಕ್ಕೆ ಹೋದಂತೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣವಾಗಿದೆ. ಈ ಗೋಪುರದಲ್ಲಿ ಮೂರು ಕೋಷ್ಠಕ ಗೂಡುಗಳಿದ್ದು ಎಡ ಮತ್ತು ಬಲ ಪಾರ್ಶ್ವಗಳಲ್ಲಿ ದ್ವಾರಪಾಲಕರು ಸುತ್ತಲೂ ಅಲಂಕಾರಿಕ ಕಂಬಗಳು, ಮೇಲೆ ಮೂರು ಕಳಶಗಳನ್ನಿರಿಸಲಾಗಿದೆ. ಗೋಪುರದ ಕೆಳಗಿನ ದ್ವಾರದಲ್ಲಿ ರಥವನ್ನು ಎಳೆದೊಯ್ಯುತ್ತಿರುವ ಹಾಗೆ ಭಾಸ್ವವಾಗುವಂತೆ ಎಡ ಮತ್ತು ಬಲ ಪಾರ್ಶ್ವದಲ್ಲಿ ಎರಡು ಕಲ್ಲಿನ ಆನೆಗಳ ವಿಗ್ರಹವನ್ನು ಬಹಳ ಮನೋಜ್ಞವಾಗಿ ಕೆತ್ತಲಾಗಿದೆ. ಗೋಪುರದ ಒಳಗೆ ಎಡ ಭಾಗದಲ್ಲಿ ನಂದಿ ಶಿಲ್ಪ, ಬಲ ಭಾಗದಲ್ಲಿ ದೇವರ ಎರದು ಪಾದಗಳಿವೆ. ಇಲ್ಲಿ ಗೋಪುರಕ್ಕೆ ಹೊಂದಿಕೊಂಡಂತೆ ಒಟ್ಟು 12 ಕಂಬಗಳಿದ್ದು, ಗಣೇಶ, ಕಮಲ, ಶಿವಲಿಂಗ ನಂದಿಯ ಚಿತ್ರಗಳನ್ನು ಕಂಬಗಳ ಸುತ್ತಲೂ ಬಿಡಿಸಲಾಗಿದೆ.

ಗೋಪುರದ ಬಳಿಯ ಉತ್ತರದ ಗೋಡೆಯಲ್ಲಿ ಲಿಂಗವನ್ನು ಸುತ್ತಿಕೊಂಡಿರುವ ಏಳು ಹೆಡೆಯ ಆದಿಶೇಷನ ಶಿಲ್ಪ, ದಕ್ಷಿಣ ಗೋಡೆಯ ಬಳಿ ದೊಡ್ಡ್ ಆಅಮೆಯನ್ನು ಏಕಶಿಲೆಯಲ್ಲಿ ಬಿಡಿಸಲಾಗಿದೆ. ಇಲ್ಲಿ ಆಮೆ ಮತ್ತು ಹಾವು ಇಡೀ ಬೆಟ್ಟವನ್ನು ಹೊತ್ತು ನಿಂತಿವೆ ಎಂಬ ಕಲ್ಪನೆಯನ್ನು ಮೂಡಿಸುವ ಕಲಾತ್ಮಕತೆಯ ಚಿತ್ರ, ಅದನ್ನು ಬಿಡಿಸಿದ ಶಿಲ್ಪಿಯ ಕಲಾಕೌಶಲ್ಯವನ್ನು ಪ್ರತಿಬಿಂಬಿಸುತ್ತದೆ. ಗೋಪುರದ ಮುಂಭಾಗದಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ಚಿಕ್ಕದಾದ ಕೋಷ್ಟಗುಡಿಗಳಿದ್ದು ಈ ಗುಡಿಗಳ ಮೇಲೆ ನಂದಿ ವಿಗ್ರಹ ಮೂರ್ತಿಗಳು ಇಲ್ಲಿಗೆ ಬರುವ ಜನತೆಯ ಆಕರ್ಷಣೆಗೆ ಮಾದರಿಯಾಗಿವೆ. ಬೆಟ್ಟದ ಕೆಳಭಾಗದಲ್ಲಿ ಸುಮಾರು 50 ಅಡಿ ಎತ್ತರದ ಉಯ್ಯಾಲೆ ಕಂಬ, ಗೋಪೌರದ ಎದುರಿಗಿರುವ ನಂದಿ ಮಂಟಪ, ಗೋಪುರದ ಎಡ ಭಾಗದಲ್ಲಿರುವ ನಂದಿ ಮಂಟಪವನ್ನು ನಿರ್ಮಿಸಲಾಗಿದೆ.

ಬೆಟ್ಟವನ್ನು ಏರುವಾಗ ಗೋಪುರದ ಬಲಭಾಗದಲ್ಲಿ ಒಂದು ಚಿಕ್ಕದಾದ ದೇವಾಲಯವಿದ್ದು ಎರಡುಜ್ ಗರ್ಭಗುಡಿಗಳನ್ನು ಹೊಂದಿದೆ. ಬಲಭಾಗದ ಗರ್ಭಗುಡಿಯಲ್ಲಿ ನಂದಿ ಶಿಲ್ಪ ಎಡ ಭಾಗದ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿನಲ್ಲೂ ನಾಲ್ಕು ನಂದಿಯ ಶಿಲ್ಪಗಳು ಹಾಗೂ ಗರ್ಭಗುಡಿಯ ಮೇಲೆ ಶಿಖರವನ್ನು ಕಾಣಬಹುದು. ವರಾಂಡದಲ್ಲಿ ಸುಮಾರು 6 ಅಡಿ ಎತ್ತರದ ಚೌಕಾಕಾರದ ಗೋಡೆಗೆ ಹೊಂದಿಕೊಂಡಿರುವ 6 ಕಂಬಗಳು ಕಂಡುಬರುತ್ತವೆ.

ಬೆಟ್ಟದ ಕೆಳ ಭಾಗದಿಂದ ಹಿಡಿದು ಮೇಲ್ಭಾಗದವರೆಗೆ ಹಲವಾರು ಚೌಕಾಕಾರದ ಸುಮಾರು ಆರೂವರೆ ಅಡಿ ಎತ್ತರದ ಉಯ್ಯಾಲೆ ಕಂಬಗಳಿದ್ದವು. ಅವುಗಳಲ್ಲಿ ಕೆಲವು ಕೆಳಗೆ ಬಿದ್ದು ನಶಿಸಿದ್ದು, ಕೆಲವು ಮಾತ್ರ ಉಳಿದಿವೆ. ಹಾಗೆಯೇ ಇಲ್ಲಿ ಸುಮಾರು 9 ಮಂಟಪಗಳಿದ್ದು, ಕೆಲವು ಮಂಟಪಗಳಲ್ಲಿ ನಂದಿಯ ವಿಗ್ರಹ, ಕಂಬಗಳಲ್ಲಿ ಕಮಲದ ಚಿತ್ರ ಮತ್ತು ಮಂಟಪದ ಮೇಲ್ಭಾಗದಲ್ಲಿ ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಾಣವಾದ ಶಿಖರವನ್ನು ಕಾಣಬಹುದು. ಈ ಬೆಟ್ಟದ ಮತ್ತೊಂದು ವಿಶೇಷತೆಯೆಂದರೆ ಅಲ್ಲಿರುವ ಕೊಳ. ಈ ಕೊಳವು ನೈಸರ್ಗಿಕವಾಗಿದ್ದು ವರ್ಷದ ಯಾವುದೇ ಕಾಲದಲ್ಲಿ ನೀರು ಬತ್ತಿ ಹೋಗದೆ ಎಲ್ಲಾ ಕಾಲದಲ್ಲೂ ತುಂಬಿರುತ್ತದೆ. ಇಲ್ಲಿ ಯಾವ ಸುಡುವ ಬೇಸಿಗೆಯಲ್ಲಿಯೂ ಸಹ ಈ ನೀರು ಕುಡಿಯಲು ಯೋಗ್ಯವಾಗಿದ್ದು ತಂಪಾಗಿರುತ್ತದೆ. ಈ ಕೊಳದಲ್ಲಿ ಮುಳುಗಿದ ನಿಂಬೆಹಣ್ಣು ರಾಮನಾಥಪುರದಲ್ಲಿರುವ ಕಾವೇರಿ ನದಿಯಲ್ಲಿ ಕಾಣುತ್ತದೆ ಎಂಬುದು ಜನರ ನಂಬಿಕೆ. ಇದು ಅತ್ಯಾಶ್ಚರ್ಯಕರವಾಗಿದ್ದರೂ ಗಮನಾರ್ಹವಾದ ಅಂಶವಾಗಿದೆ.

**ವೀರಭದ್ರೇಶ್ವರ ದೇವಾಲಯ**

ಈ ದೇವಾಲಯವು ಬೆಟ್ಟವನ್ನೇರುವಾಗ ಮಧ್ಯಮಾರ್ಗದಲ್ಲಿ ಬಲ ಭಾಗದಲ್ಲಿದೆ. ಇದು ಪೂರ್ವಾಭಿಮುಖವಾಗಿದ್ದು, ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಪ್ರಸ್ತುತ ದೇವಾಲಯದ ಕೆಲವು ಭಾಗಗಳು ದುಃಸ್ಥಿತಿಯ ಹಂತ ತಲುಪಿವೆ. ಆದರೆ ಈ ದೇವಾಲಯದ ನಿರ್ಮಾಣದ ಬಗ್ಗೆ ನಮಗೆ

ಸ್ಪಷ್ಟವಾದ ಮಾಹಿತಿಗಳು ದೊರೆಯುವುದಿಲ್ಲ. ಆದರೂ ಸಹ ವಾಸ್ತು ರಚನಾ ಶೈಲಿಯಿಂದ ಪ್ರಾಯಶಃ ಈ ದೇವಾಲಯವು ಚಂಗಾಳ್ವ ಅರಸರ ಆಡಳಿತದ ಅವಧಿಯಲ್ಲಿ ನಿರ್ಮಾಣವಾಗಿರಬಹುದು ಎಂದು ಹೇಳಬಹುದು. ಈ ದೇವಾಲಯವು ಚೌಕಾಕಾರದ ಸುಮಾರು 42 ಕಂಬಗಳನ್ನು ಹೊಂದಿದ್ದು, ಕಂಬಗಳಲ್ಲಿ ಯಾವುದೇ ಚಿತ್ರ ಕೆತ್ತನೆಗಳಿಲ್ಲ. ಇದು ಗರ್ಭಗುಡಿ, ಸುಕನಾಸಿ, ನವರಂಗ ಹಾಗೂ ಮುಖಮಂಟಪಗಳನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ವೀರಭದ್ರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದ ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರ ಹಾಗೂ ಮುಖಮಂಟಪಗಳಲ್ಲಿ ಚೌಕಾಕಾರವಾದ 8 ಕಂಬಗಳಿದ್ದು ಮಧ್ಯದಲ್ಲಿ ನಂದಿಯ ವಿಗ್ರಹವನ್ನು ಎತ್ತರವಾದ ಪೀಠದ ಮೇಲೆ ಕೂರಿಸಲಾಗಿದೆ. ದೇವಾಲಯದ ಭಿತ್ತಿಯಲ್ಲಿ ಯಾವುದೇ ಕೋಷ್ಠಕಗಳಾಗಲಿ, ಅರೆಗಂಬಗಳಾಗಲಿ ಕಂಡುಬರುವುದಿಲ್ಲ. ಗರ್ಭಗುಡಿಯ ಮೇಲೆ ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತಗೊಂಡಿರುವ ವೇಸರ ಶೈಲಿಯ ಶಿಖರವಿದ್ದು ಅದರ ಕೆಲವು ಭಾಗ ನಶಿಸಿದೆ. ಈ ದೇವಾಲಯದಲ್ಲಿ ಇಂದು ಪೂಜಾ ಕಾರ್ಯ ನಡೆಯುವುದಿಲ್ಲ. ಆದರೂ ಈ ದೇವಾಲಯವು ಅಧ್ಯಯನದ ದೃಷ್ಟಿಯಿಂದ ಬಹಳ ಉಪಯುಕ್ತವಾಗಿದೆ.

**ಸಿಡಿಲು ಮಲ್ಲಿಕಾರ್ಜುನ ದೇವಾಲಯ**

ಈ ದೇವಾಲಯವು ಗ್ರಾಮದ ಹೊರಭಾಗದಲ್ಲಿ ಸುಮಾರು 1 ಕಿ.ಮೀ. ಊರಿನ ಪೂರ್ವ ದಿಕ್ಕಿಗೆ ಬೆಟ್ಟದ ಮೇಲೆ ಕಂಡುಬರುತ್ತದೆ. ಇದು ವೀರಭದ್ರೇಶ್ವರ ದೇವಾಲಯದಿಂದ ಅನತಿ ದೂರದಲ್ಲೇ ಸಿಡಿಲು ಮಲ್ಲಿಕಾರ್ಜುನ ದೇವಾಲಯವು ಎತ್ತರವಾದ ಬೆಟ್ಟದ ಮೇಲೆ ಕಾಣಸಿಗುವುದು ಈ ದೇವಾಲಯವು ಸಂಪೂರ್ಣವಾಗಿ ಗ್ರಾನೈಟ್ ಶಿಲೆಯಿಂದ ರಚಿತಗೊಂಡಿದೆ. ಇದನ್ನು ಮೊದಲು ಅನ್ನದಾನಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವೆಂದು ಕರೆಯುತ್ತಿದ್ದುದು ಕಂಡುಬರುತ್ತದೆ. ಅನ್ನ ಮಲ್ಲಿಕಾರ್ಜುನ ಶಿಡಿಲು ಮಲ್ಲಿಕಾರ್ಜುನಸ್ವಾಮಿಯಾದುದಕ್ಕೆ ಒಂದು ಇತಿಹಾಸ್ದವೇ ಇದೆ. ಒಮ್ಮೆ ದೇವಾಲಯದಲ್ಲಿ ಪೂಜಾ ಕಾರ್ಯ ನಡೆಯುತ್ತಿರುವಾಗ, ಭಾಕ್ತರೆಲ್ಲರೂ ಹೊರಾಂಗಣದಲ್ಲಿ ನೆರೆದಿದ್ದರು. ಅರ್ಚಕರು ಭಕ್ತಿಯಿಂದ ದೇವರ ಪೂಜೆ ನಡೆಸುತ್ತಿರುವಾಗ ಇದ್ದಕ್ಕಿದ್ದಂತೆ ಸಿಡಿಲು ವಾತಾಯನದ ಮೂಲಕ ಒಳಪ್ರವೇಶಿಸಿ ನೇರವಾಗಿ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಪ್ರದಕ್ಷಿಣೆ ಹಾಕಿ ಅಲ್ಲಿಯ ಆ ಭಕ್ತರಿಗೂ ಸ್ವಲ್ಪವೂ ತಾಕದಂತೆ ಅದೇ ವಾತಾಯನದ ಮೂಲಕ ಹೊರಟು ಹೋಗುತ್ತದೆ. ಅಲ್ಲಿದ್ದ ಭಕ್ತರೆಲ್ಲರಿಗೂ ಆಶ್ಚರ್ಯವಾಗುತ್ತದೆ. ಅಂದಿನಿಂದ ಅನ್ನದಾನಿ ಮಲ್ಲಿಕಾರ್ಜುನಸ್ವಾಮಿಯನ್ನು ಸಿಡಿಲು ಮಲ್ಲಿಕಾರ್ಜುನಸ್ವಾಮಿ ಎಂದು ಕರೆಯಲಾಯಿತು.

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು 2 ಗರ್ಭಗುಡಿಯನ್ನು ಹೊಂದಿದೆ. ಒಂದು ಗರ್ಭಗುಡಿಯಲ್ಲಿ ಗಿರಿಜಮ್ಮ ದೇವಿ, ಮತ್ತೊಂದು ಗರ್ಭಗೃಹದಲ್ಲಿ ಶಿವಲಿಂಗವಿದೆ. ಶಿವಲಿಂಗವಿರುವ ಗರ್ಭಗುಡಿಯ ಮುಂಭಾಗದಲ್ಲಿ ಸುಖನಾಸಿ, ನಾಲ್ಕು ಕಂಬಗಳುಳ್ಳ ನವರಂಗವಿದೆ. ನವರಂಗದ

ಮೇಲ್ಭಾಗದಲ್ಲಿ ಭುವನೇಶ್ವರಿಯ ಚಿತ್ರವಿದೆ. ಈ ಕಂಬಗಳು ವೃತ್ತಾಕಾರದಲ್ಲಿದ್ದು ಸುಮಾರು 6 ಅಡಿ ಎತ್ತರವುಳ್ಳವುಗಳಾಗಿವೆ. ನವರಂಗದ ಕಂಬಗಳ ಮೇಲೆ ಕಾಳಿಂಗಮರ್ದನ, ನಂದಿಸಹಿತ ಉಮಾಮಹೇಶ್ವರ, ವೀರಾಂಜನೇಯ, ನೃತ್ಯ ಮಾಡುತ್ತಿರುವ ಸ್ತ್ರೀಯ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದಲ್ಲಿ ಬಲಭಾಗದಲ್ಲಿ ವೀರಭದ್ರೇಶ್ವರನ ಚಿತ್ರಗಳಿವೆ. ಗರ್ಭಗುಡಿಯ ಮುಂಭಾಗದಲ್ಲಿ ಬಲಭಾಗದಲ್ಲಿ ವೀರಭದ್ರೇಶ್ವರನ ವಿಗ್ರಹ ಮೂರ್ತಿಯನ್ನಿಡಲಾಗಿದೆ. ಗಿರಿಜಮ್ಮ ದೇವಿಯ ಗರ್ಭಗುಡಿಯಲ್ಲಿ ದೇವಿ ವಿಗ್ರಹವಿದ್ದು ಮುಂಭಾಗದಲ್ಲಿ ಸುಖನಾಸವಿದೆ. ನವರಂಗದಲ್ಲಿ ಪೂರ್ವಕ್ಕೆ ಇಕ್ಕೆಡೆಗಳಲ್ಲಿ ಸುಮಾರು 8 ಅಡಿ ಎತ್ತರವಿರುವ ಚೌಕಾಕಾರದ 14 ಕಂಬಗಳು ದಕ್ಷಿಣಕ್ಕೆ ಗೋಡೆಗೆ ಹೊಂದಿಕೊಂಡಂತೆ, 10 ಕಂಬಗಳು, ಉತ್ತರಕ್ಕೆ 5 ಕಂಬಗಳನ್ನು ಕಾಣಬಹುದು. ಈ ಕಂಬಗಳು ಸರಳವಾಗಿದ್ದು  ಯಾವುದೇ ರೀತಿಯ ಉಬ್ಬುಶಿಲ್ಪಗಳು ಕಂಡುಬರುವುದಿಲ್ಲ. ಕಂಬದ ಮೇಲ್ಭಾಗದಲ್ಲಿ ಆಯತಾಕಾರದ ಚಾಚು ಬೋದಿಗೆಯನ್ನು ಸೇರಿಸಿದ್ದು, ಅದರ ಮೇಲ್ಭಾಗದಲ್ಲಿ ಆಯತಾಕಾರದ ಚಪ್ಪಡಿಯ ತೊಲೆಯನುನು ಜೋಡಿಸಲ್ಪಟ್ಟಿದ್ದು ಅದರ ಮೇಲ್ಭಾಗಕ್ಕೆ ಚಪ್ಪಡಿಯನ್ನು ಸೇರಿಸಲಾಗಿದೆ.

ದೇವಾಲಯದ ಹೊರಭಾಗದ ಮುಖ್ಯದ್ವಾರದ ಎಡಭಾಗದ ಗೋಡೆಯಲ್ಲಿ ಗಾಳಿ ಬೆಳಕಿಗೋಸ್ಕರ ಒಂದು ಜಾಲಂಧ್ರವನ್ನು ಇಡಲಾಗಿದ್ದು, ಇದೇ ಜಾಲಂಧ್ರದ ಮುಖಾಂತರ ಸಿಡಿಲು ಗರ್ಭಗುಡಿಯಲ್ಲಿರುವ ಶಿವಲಿಂಗವನ್ನು ಪ್ರದಕ್ಷಿಣೆ ಹಾಕಿ ದರ್ಶನ ಪಡೆದು ಅದೇ ಜಾಲಂಧರ ಮೂಲಕ ಹೊರ ಹೋಗುವುದು ಎಂಬುದು ಜನರ ನಂಬಿಕೆ. ಈ ಜಾಲಂಧ್ರದ ಪಕ್ಕದಲ್ಲಿ ಪೀಠದ ಮೇಲಿರುವ ಒಂದು ಕೋಷ್ಟಕ ಗುಡಿಯಲ್ಲಿ ಶೈವ ಧರ್ಮಕ್ಕೆ ಪೂರಕವಾಗಿ ಉಬ್ಬು ಶಿಲ್ಪಗಳನ್ನು ಕಡೆಯಲಾಗಿದೆ. ಅದರ ಮೇಲ್ಭಾಗದಲ್ಲಿ ಶಿವಲಿಂಗಕ್ಕೆ ಹಾಲನ್ನು ಸುರಿಸುತ್ತಿರುವ ಹಾಗೆಯೇ ತನ್ನ ನಾಲಿಗೆಯಿಂದ ಶಿವಲಿಂಗವನ್ನು ಸ್ಪರ್ಶಿಸುತ್ತಿರುವ ಹಸುವಿನ ಚಿತ್ರವನ್ನು ಕಾಣಬಹುದು. 3ನೇ ಅಂತಸ್ತಿನ ಮಧ್ಯೆದಲ್ಲಿ ಶಿವಲಿಂಗ ಎಡಕ್ಕೆ ನಂದಿ ಬಲಕ್ಕೆ ಶಿವಭಕ್ತನ ಉಬ್ಬುಶಿಲ್ಪಗಳಿವೆ. ಹೀಗೆಯೇ 4 ಮತ್ತು 5ನೇ ಅಂತಸ್ಥಿನಲ್ಲಿ ಇದೇ ಮಾದರಿಯ ಉಬ್ಬುಶಿಲ್ಪಗಳನ್ನು ಕಾಣಬಹುದು. ಈ ಕೋಷ್ಟಕದ ಮುಂಭಾಗದಲ್ಲಿ ಉತ್ತರವಾದ ಚೌಕಾಕಾರದ ಕಲ್ಲಿನ ಪೀಠದ ಮೇಲೆ ನಂದಿ ವಿಗ್ರಹವನ್ನು ಕೋಷ್ಟಕದ ಕಡೆಗೆ ಮುಖಮಾಡಿರುವಂತೆ ಕೂರಿಸಲಾಗಿದೆ. ಈ ಹಿನ್ನೆಲೆಯಿಂದ ಇದೊಂದು ಶೈವ ಪರಂಪರೆಯ ಉತ್ತಮವಾದ ದೇವಾಲಯವೆಂದೆ ಪರಿಗಣಿಸಬಹುದಾಗಿದೆ. ದೇವಾಲಯದ ಮೇಲ್ಭಾಗದಲ್ಲಿ ಎರಡು ಗರ್ಭಗುಡಿಗೆ ಸಂಬಂಧಿಸಿದಂತೆ ಎರಡು ವಿಮಾನಗಳನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ.

## ನಂದಿಕಂಬ

ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಮುಂಭಾಗದಲ್ಲಿ ಸ್ವಲ್ಪ ಕೆಳಭಾಗದಲ್ಲಿ ಎತ್ತರವಾದ್ಧ ಬಂಡೆಯ ಮೇಲೆ ಸುಮಾರು 10 ಅಡಿ ಎತ್ತರವಾದ ಕಂಬವಿದೆ. ಈ ಕಂಬವನ್ನು ಸೂಕ್ಷ್ಮವಾಗಿ

ಗಮನಿಸಿದರೆ ಗಂಗರ ಮತ್ತು ಚೋಳರ ಕಾಲದ ವಾಸ್ತುಶೈಲಿಯನ್ನು ಹೊಂದಿದೆ. ಏಕೆಂದರೆ ಈ ಕಂಬವು ಪೀಠದ ಭಾಗ ಚೌಕಾಕಾರವಾಗಿದ್ದು ದಿಂಡಿನ ಭಾಗವು ವೃತ್ತಕಾರದ ಮಾದರಿಯಲ್ಲಿ ಕಂಡುಬಂದಿದ್ದು, ಅದರ ಮೇಲೆ ಚಾಚು ಬೋದಿಗೆ ಇದೆ. ಇದು ಚೋಳರ ಕಾಲದ ಮಾದರಿಯಂತಿದೆ. ಬೋದಿಗೆಯ ಮೇಲ್ಭಾಗದಲ್ಲಿ ನಂದಿ ಶಿಲ್ಪವನ್ನು ಕೂರಿಸಲಾಗಿದೆ. ಈ ಕಂಬವು ಸರಳವಾಗಿದ್ದು, ಯಾವುದೇ ಕೆತ್ತನೆಗಳಿಲ್ಲ. ಈ ಕಂಬವನ್ನು ಸ್ಥಳೀಯವಾಗಿ ನಂದಿ ಕಂಬ ಎಂತಲೇ ಕರೆಯುವುದು ರೂಢಿಯಲ್ಲಿದೆ.

## ಆಂಜನೇಯಸ್ವಾಮಿ ದೇವಾಲಯ

ಸಿಡಿಲು ಮಲ್ಲಿಕಾರ್ಜುನ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಕಂಡುಬರುತ್ತದೆ. ಗರ್ಭಗುಡಿಯಲ್ಲಿ ಕಂಡುಬರುವ ಕಲ್ಲು ಸ್ವಾಭಾವಿಕವಾದುದ್ದಾಗಿದ್ದು ಈ ಕಲ್ಲು ಸುಮಾರು 1'5 ಅಡಿ ತ್ತರವಾಗಿದ್ದು, ಇದರಲ್ಲಿ ಶ್ರೀ ಆಂಜನೇಯನ ವಿಗ್ರಹವನ್ನು ಕಡೆಯಲಾಗಿದೆ. ಈ ಸ್ವಾಭಾವಿಕವಾದ ಕಲ್ಲು ಅತಿ ಎತ್ತರಕ್ಕೆ ಬೆಳೆಯುತ್ತಲೇ ಇದ್ದು, ಆದರೆ ಇದು ಅತಿ ಎತ್ತರಕ್ಕೆ ಬೆಳೆದರೆ ದೇವಾಲಯವನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲವೆಂದು ಆ ಕಲ್ಲಿನ ನೆತ್ತಿಯ ಮೇಲೆ ಕಬ್ಬಿಣದ ಮೊಳೆಯನ್ನು ಹೊಡೆದು ಅದರ ಬೆಳವಣಿಗೆಯನ್ನು ನಿಲ್ಲಿಸಿ ದೇವಾಲಯವನ್ನು ನಿರ್ಮಿಸಲಾಯಿತು ಎಂಬ ಪ್ರತೀತಿ ಇದೆ. ಈ ದೇವಾಲಯವು ಉತ್ತರಾಭಿಮುಖವಾಗಿ ನಿರ್ಮಾಣವಾಗಿದೆ. ದೇವಾಲಯದ ಗರ್ಭಗುಡಿಯಲ್ಲಿರುವ ಕಲ್ಲಿನಲ್ಲಿ ಆಂಜನೇಯ ಶಿಲ್ಪ ಮತ್ತು ಒಂದು ಮೀನಿನ ಚಿತ್ರವನ್ನು ಕಾಣಬಹುದು. ಗರ್ಭಗುಡಿಯ ಮುಂಭಾಗದಲ್ಲಿ ವಿಶಾಲವಾದ ವರಾಂಡಾವಿದ್ದು ಯಾವುದೇ ರೀತಿಯ ಕಂಬಗಳು ಕಂಡುಬರುವುದಿಲ್ಲ. ದೇವಾಲಯದ ಮೇಲ್ಭಾಗದ ನಾಲ್ಕು ದಿಕ್ಕುಗಳಲ್ಲೂವಿವಿಧ ರೀತಿಯ ಉಬ್ಬುಶಿಲ್ಪಗಳನ್ನು ಕಾಣಬಹುದು. ಉತ್ತರಕ್ಕೆ ಕಲ್ಯಾಣವತಾರ, ಶ್ರೀ ವೆಂಕಟಾಚಲಪತಿ, ಶ್ರೀಕೃಷ್ಣವತಾರ, ಪಶ್ಚಿಮಕ್ಕೆ ಪರಶುರಾಮಾವತಾರ, ಶ್ರೀವಾಮನಾವತಾರ, ಶ್ರೀ ಲಕ್ಷ್ಮೀನರಸಿಂಹವತಾರ, ಪೂರ್ವಕ್ಕೆ ವರಾಹವತಾರ, ಕೂರ್ಮಾವತಾರ, ಮತ್ಸ್ಯಾವತಾರದ ವಿಗ್ರಹಗಳಿವೆ. ಈ ದೇವಾಲಯದ ಮುಂಭಾಗದಲ್ಲಿ ಎಡಭಾಗಕ್ಕೆ ಒಂದು ಶಿವಲಿಂಗವಿದ್ದು ಅದರ ಮುಂದೆ ಒಂದು ಗುಡನ್ನು ಕೊರೆದು ಅದರೊಳಗೆ ಗಣಪತಿ ಮತ್ತು ಶಿವಪಾರ್ವತಿಯರ ವಿಗ್ರಹವನ್ನು ಕೆತ್ತಲಾಗಿದೆ. ದೇವಾಲಯದ ಮುಂಭಾಗದ ದ್ವಾರದ ಮೇಲೆ ಆಂಜನೇಯಸ್ವಾಮಿಯು ಗದೆಯನ್ನು ಹಿಡಿದು ನಿಂತಿರುವ ವಿಗ್ರಹವನ್ನು ಕಾಣಬಹುದು.

ಒಟ್ಟಾರೆಯಾಗಿ, ಬೆಟ್ಟದಪುರ ಪರಿಸರದ ದೇವಾಲಯಗಳು ಸಮಾಜದ ಕೇಂದ್ರ ಬಿಂದುಗಳಾಗಿದ್ದು ಧಾರ್ಮಿಕ, ಸಾಮಾಜಿಕ ಮತ್ತು ಕಲಾತ್ಮಕ ಚಟುವಟಿಕೆಗಳ ಕೇಂದ್ರಗಳೂ ಸಹ ಆಗಿದ್ದವು. ಸಮಾಜದ ಬೆಳವಣಿಗೆಯ ದೃಷ್ಟಿಯಲ್ಲಿ ಬೆಟ್ಟದಪುರ ಸುತ್ತಮುತ್ತಲ ಜನತೆಯನ್ನು ಆಕರ್ಷಿಸುವ ಒಂದು ಪ್ರಮುಖ ಆಕರ್ಷಣೆ ಎಂದರೆ ವಿಶಿಷ್ಟ ರೀತಿಯಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು. ಇಲ್ಲಿ ಕಂಡುಬರುವ ಮಲ್ಲಿಕಾರ್ಜುನ ದೇವಾಲಯ, ಪವಾಡ ಬಸವೇಶ್ವರ ದೇವಾಲಯ, ರಾಮೇಶ್ವರ

ದೇವಾಲಯ, ಬೆಟ್ಟದ ಮೇಲಿರುವ ಸಿಡಿಲು ಮಲ್ಲಿಕಾರ್ಜುನ ದೇವಾಲಯ, ವೀರಭದ್ರೇಶ್ವರ ದೇವಾಲಯ ಹಾಗೂ ಆಂಜನೇಯಸ್ವಾಮಿ ದೇವಾಲಯಗಳು ಅತ್ಯಾಕರ್ಷಕವಾದವುಗಳಾಗಿವೆ ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು


1. ಹಾ.ಮಾ.ನಾಯಕ – ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. 1972.
2. ಡಾ.ಪಿ.ಕೆ.ರಾಜಶೇಖರ್, ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು,2010.
3. ಕೂ.ಸ. ಅಪರ್ಣ – ಕರ್ನಾಟಕ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1994.
4. ಕರ್ನಾಟಕ ಪರಂಪರೆ ಸಂಪುಟ–2, ಕರ್ನಾಟಕ ನವಕರ್ನಾಟಕ ಪ್ರಕಾಶನ, ಬೆಂಗಳೂರು,2006.
5. ತಿಪ್ಪೇರುದ್ರಸ್ವಾಮಿ ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು,1968.
6. ಎಪಿಗ್ರಾಫಿಯ ಕರ್ನಾಟಕ ಸಂಪುಟ–4, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,1975.
7. ಶ್ರೀಕಂಠಶಾಸ್ತ್ರಿ ಎಸ್. – ಹೊಯ್ಸಳ ವಾಸ್ತುಶಿಲ್ಪ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965.
8. ಶೆಟ್ಟರ್ ಎಸ್. – ಹೊಯ್ಸಳರ ದೇವಾಲಯಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1991.